# ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಭಾವನೆಗಳು

**ಡಾ.ಎನ್.ಬಿ. ದೇಸಾಯಿ**

ಸ್ವಾಮಿ ವಿವೇಕಾನಂದರು ಎಲ್ಲ ಜ್ಞಾನಕ್ಷೇತ್ರಗಳಲ್ಲೂ ವಿಹರಿಸಿದ್ದಾರೆ. ಅವರ ವೈಜ್ಞಾನಿಕ ಚಿಂತನೆಗಳ ಮುಖ್ಯಾಂಶಗಳನ್ನು ಪ್ರಸ್ತುತಪಡಿಸಿರುವ ಶ್ರೀ ದೇಸಾಯಿಯವರು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ.

ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಎಂಥದೆಂದರೆ ಅವರ ಗಂಭೀರ ಅಂತರಾಳದಿಂದ ಸಿಡಿಯುತ್ತಿದ್ದ ವಾಣಿಯಲ್ಲಿ ವೈವಿಧ್ಯಮಯ ಜ್ಞಾನದ ಸುದೀಪ್ತ ಬೆಳಕನ್ನು ಕಾಣುತ್ತೇವೆ. ಒಬ್ಬ ಅಮೆರಿಕದ ಮಹಿಳೆ ಈ ರೀತಿ ಬರೆಯುತ್ತಾರೆ: "ಓಹ್, ವಿವೇಕಾನಂದರ ದಿವ್ಯ ಬೋಧನೆಗಳೆಂಥವು! ಅಲ್ಲಿ ಅರ್ಥಹೀನವಾದದ್ದು ಒಂದೂ ಇಲ್ಲ. ಏಕೆಂದರೆ ನಾನು ಪರಮಸತ್ಯದ ಇಣುಕು ನೋಟವೊಂದನ್ನು ಪಡೆದುಕೊಂಡಿದ್ದೇನೆ." ಇದೇ ಮನೋಭಾವದಿಂದ ನಾವು ಸಹ ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಭಾವನೆಗಳನ್ನು ಕುರಿತು ಚಿಂತನ ಮಂಥನ ಮಾಡೋಣ.

೧೮೯೩ ವಿಶ್ವಧರ್ಮಸಮ್ಮೇಳನದ ಅಂಗವಾದ "ವೈಜ್ಞಾನಿಕ ವಿಭಾಗ"ದಲ್ಲಿ ಅಧ್ಯಕ್ಷರಾದ ಶ್ರೀ ಮೆರ್ವಿನ್ ಮೇರಿ ಸ್ನೆಲ್ (Merwin-Marie Snell), ಈ ರೀತಿ ಬರೆಯುತ್ತಾರೆ: ".... ಸಮ್ಮೇಳನದ ಸಭೆಯಲ್ಲಿಯೂ ವೈಜ್ಞಾನಿಕ ವಿಭಾಗದಲ್ಲಿಯೂ ವಿವೇಕಾನಂದರು ಅನೇಕ ಬಾರಿ ಮಾತನಾಡಿದರು. ವೈಜ್ಞಾನಿಕ ವಿಭಾಗದ ಅಧ್ಯಕ್ಷತೆಯನ್ನು ವಹಿಸುವ ಗೌರವ ನನ್ನದಾಗಿತ್ತು. ಅವರು ಪ್ರತಿಸಲ ಮಾತನಾಡಿದಾಗಲೂ ಸಭಿಕರು ಅವರನ್ನು ಇತರೆಲ್ಲ ಭಾಷಣಕಾರರಿಗಿಂತ ಹೆಚ್ಚಿನ ಉತ್ಸಾಹದಿಂದ ಸ್ವಾಗತಿಸಿದರು. ಅವರು ಎಲ್ಲಿ ಹೋದರೂ ಅವರನ್ನು ಜನರು ಮುತ್ತಿಕೊಳ್ಳುತ್ತಿದ್ದರು. ಅವರು ಉಚ್ಚರಿಸುವ ಪ್ರತಿಯೊಂದು ಶಬ್ದವನ್ನು ಕಾತರದಿಂದ ನಿರೀಕ್ಷಿಸುತ್ತಿದ್ದರು... ಮನುಷ್ಯರ ಮಧ್ಯೆ ಅವರೊಬ್ಬ ರಾಜನೇ ಸರಿ."

> ವಿಜ್ಞಾನವೆಂದರೆ ಐಕ್ಯತೆಯನ್ನು ಕಂಡುಹಿಡಿಯುವುದು ಎಂದಲ್ಲದೆ ಬೇರೇನೂ ಅಲ್ಲ. ಪರಿಪೂರ್ಣ ಐಕ್ಯತೆಯನ್ನು ಮುಟ್ಟಿದ ಮೇಲೆ ವಿಜ್ಞಾನದ ಬೆಳವಣಿಗೆ ಕೊನೆಗೊಂಡಂತೆಯೆ.
>
> *—ಸ್ವಾಮಿ ವಿವೇಕಾನಂದ*

*Detroit Evening Newspaper* ನಲ್ಲಿ "Culture at Home" ಎಂಬ ಶೀರ್ಷಿಕೆಯಲ್ಲಿ ಬಂದ ಕೆಲವು ಅಂಶಗಳು ಈ ರೀತಿ ಇವೆ : "ಅಲ್ಲಿಯ ಒಂದು ಚಹಾಕೂಟದಲ್ಲಿ ಒಬ್ಬರು ಇವರನ್ನು ರಸಾಯನ ಶಾಸ್ತ್ರವನ್ನು ಓದಲು ಯಾವ ಪುಸ್ತಕಗಳ ಆವಶ್ಯಕತೆ ಇದೆ ಎಂದು ಕೇಳಿದರು. ಸ್ವಾಮಿಜಿಯವರು ಈ ವಿಜ್ಞಾನದಲ್ಲಿ ಸಾಕಷ್ಟು ಕೆಲಸ ಮಾಡಿದ ಇಂಗ್ಲಿಷ್ ಲೇಖಕರು ಬರೆದ ಪುಸ್ತಕಗಳ ಪಟ್ಟಿಯನ್ನು ಅವರ ಎದುರಿಗೆ ಇಟ್ಟರು. ಮತ್ತೊಬ್ಬ ವ್ಯಕ್ತಿಯ ವಿನಂತಿಯ ಮೇರೆಗೆ ಖಗೋಲ ಶಾಸ್ತ್ರದಲ್ಲಿ ಕೆಲಸ ಮಾಡಿದ ಬ್ರಿಟಿಷ್ ಲೇಖಕರ ಪಟ್ಟಿಯನ್ನು ತಯಾರು ಮಾಡಿಕೊಟ್ಟರು." (*Complete Works*, Vol. 9, p.449).

## ವಿಜ್ಞಾನವನ್ನು ಕುರಿತು ವಿವೇಕಾನಂದರ ವಾಣಿ

೧೮೯೩ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಒಂದು ಭಾಷಣದಲ್ಲಿ, ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ಸ್ವಾಗತಿಸುತ್ತ ಸ್ವಾಮೀಜಿ ಈ ರೀತಿ ಹೇಳುತ್ತಾರೆ: "ವಿಜ್ಞಾನವೆಂದರೆ ಐಕ್ಯತೆಯನ್ನು ಕಂಡುಹಿಡಿಯುವುದು ಎಂದಲ್ಲದೆ ಬೇರೇನೂ ಅಲ್ಲ. ಪರಿಪೂರ್ಣ ಐಕ್ಯತೆಯನ್ನು ಮುಟ್ಟಿದ ಮೇಲೆ ವಿಜ್ಞಾನದ ಬೆಳವಣಿಗೆ ಕೊನೆಗೊಂಡಂತೆಯೆ. ಏಕೆಂದರೆ ಅದು ತನ್ನ ಗುರಿಯನ್ನು ಮುಟ್ಟಿರುತ್ತದೆ. ಹೀಗಾಗಿ, ಯಾವ ಒಂದು ಧಾತುವಿನಿಂದ ಉಳಿದ ಎಲ್ಲ ಧಾತುಗಳೂ ಆಗುವುವೋ ಅದನ್ನು ಕಂಡುಹಿಡಿದ ಮೇಲೆ ರಸಾಯನ ವಿಜ್ಞಾನ ಬೆಳೆಯಲು ಸಾಧ್ಯವಾಗಲಿಲ್ಲ. ಉಳಿದ ಎಲ್ಲ ಶಕ್ತಿಗಳೂ ಯಾವ ಒಂದು ಶಕ್ತಿಯ ವ್ಯಕ್ತ ರೂಪಗಳಾಗಿವೆಯೋ ಅದನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾದರೆ ಭೌತವಿಜ್ಞಾನದ ಬೆಳವಣಿಗೆ ನಿಂತಂತೆಯೇ. ಮೃತ್ಯುಮಯವಾದ ಈ ವಿಶ್ವದಲ್ಲಿ ಯಾರು ಜೀವಪ್ರವಾಹವಾಗಿದ್ದಾನೆಯೋ, ನಿರಂತರವಾಗಿ ಬದಲಾಗುತ್ತಿರುವ ಈ ಜಗತ್ತಿಗೆ ಯಾರು ಚಿರವಾದ ಆಧಾರಭೂತನೋ, ಉಳಿದೆಲ್ಲ ಆತ್ಮಗಳೂ ಯಾವ ಒಂದು ಆತ್ಮನ ತೋರಿಕೆಯ ವ್ಯಕ್ತರೂಪಗಳೋ ಅವನನ್ನು ಕಂಡುಹಿಡಿದಾಗ ಧರ್ಮ ಪರಿಪೂರ್ಣತೆಯನ್ನು ಪಡೆಯುತ್ತದೆ. ಹೀಗೆ ಅನೇಕತೆ ಮತ್ತು ದ್ವೈತಗಳ ಮೂಲಕವೇ ಕೇವಲ ಐಕ್ಯತೆಯನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಮತಧರ್ಮ ಇದರಿಂದಾಚೆಗೆ ಹೋಗಲಾರದು. ಎಲ್ಲ ವಿಜ್ಞಾನಗಳ ಗುರಿಯೂ ಇದೇ.... ವಿಜ್ಞಾನ ಅಂತಿಮವಾಗಿ ಇದೇ ಸಿದ್ಧಾಂತಕ್ಕೆ ಬಂದೇ ತೀರುತ್ತದೆ. ಇಂದು ಅದು ಬಳಸುತ್ತಿರುವ ಪದ ಸೃಷ್ಟಿ ಎಂಬುದಲ್ಲ, ಅಭಿವ್ಯಕ್ತಿ ಎಂಬುದು. ಹಿಂದುವಾದವನು ಯಾವ ಭಾವನೆಯನ್ನು ಬಹು ದೀರ್ಘಕಾಲದಿಂದಲೂ ಪೋಷಿಸಿ ಕೊಂಡು ಬಂದಿದ್ದಾನೋ ಅದನ್ನೇ ಇಂದು ವಿಜ್ಞಾನ ಹೆಚ್ಚು ಅಧಿಕೃತವಾದ ಮತ್ತು ಶಕ್ತಿಯುತವಾದ ಭಾಷೆಯಲ್ಲಿ ಪ್ರತಿಪಾದಿಸುತ್ತಿದೆ ಎಂದು ತಿಳಿದು ಅವನಿಗಾಗುತ್ತಿರುವ ಸಂತೋಷ ಅಷ್ಟಿಷ್ಟಲ್ಲ." (ಕೃತಿಶ್ರೇಣಿ, ೧:೧೬)

ದೇಹಾತ್ಮವಾದ ಅಥವಾ ಜಡವಾದವು ಎಲ್ಲ ವಿಜ್ಞಾನದ ಅಂಗಗಳಿಗೆ ಒಂದು ಅಡ್ಡಗೋಡೆ ಇದ್ದಂತೆ, ಒಂದು ತರಹದ ಅಂಧ ವಿಶ್ವಾಸ. ಈ ಅಂಧವಿಶ್ವಾಸದಿಂದ ಹೊರಬಂದಾಗ ಇನ್ನು

ಹೊಸ ಸಂಶೋಧನೆಗಳು ಬರುವುವು, ಆಗ ಧರ್ಮವು ವಿಜ್ಞಾನದ ಒಂದು ಅಂಗವೆಂದು ಕರೆಯಿಸಿಕೊಳ್ಳುವುದು. ವಿಜ್ಞಾನದ ಮೂಲ ಉದ್ದೇಶ—"ಮಾನವ ಉನ್ನತಿ ಮತ್ತು ಸಂತೃಪ್ತಿ"ಯಾಗಿರಬೇಕು. ಇದನ್ನೇ ವೇದಾಂತ ಅನೇಕ ಸಹಸ್ರಾರು ವರ್ಷಗಳ ಹಿಂದೆ ಸಾರಿದೆ.

**ವೇದಾಂತದ ಭಾವನೆಗಳು ತುಂಬ ವೈಜ್ಞಾನಿಕ. ಈ ಯುಗದ ಆಶೋತ್ತರಗಳೊಂದಿಗೆ, ಮತ್ತು ಆಧುನಿಕ ವಿಜ್ಞಾನದ ತೀರ್ಮಾನಗಳೊಂದಿಗೆ ಅವು ತುಂಬಾ ಸಾಮರಸ್ಯದಿಂದಿವೆ.**

—*ನಿಕೋಲಾ ಟೆಸ್ಲಾ* (*Nichola Tesla*)

೧೮೯೩ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ಜೊತೆಗೆ Columbian Exposition ಎಂಬ ವಿಜ್ಞಾನ ಮೇಳ ಸಹ ಜನರ ಆಕರ್ಷಣೆಯ ಕೇಂದ್ರವಾಗಿತ್ತು. ಚಿಂತನ ಮಂಥನ ಮಾಡುವುದು ಅದರ ಗುರಿಯಾಗಿತ್ತು. ಇದರಲ್ಲಿ ಸ್ವಾಮೀಜಿ ಭಾರತೀಯ ಧರ್ಮಗಳ ಬಗ್ಗೆ, ಅದರ ಇತಿಹಾಸ, ಆಧ್ಯಾತ್ಮಿಕ ಚಿಂತನೆ ಕುರಿತು ಮಾಡಿದ ಭಾಷಣಗಳು ವಿಚಾರಾತ್ಮಕವಾಗಿವೆ. ಆ ಸಮಯದಲ್ಲಿ ಜಗತ್ತಿನ ಅನೇಕ ಶ್ರೇಷ್ಠ ವಿಜ್ಞಾನಿಗಳನ್ನು ಭೇಟಿಮಾಡಿ ವಿಚಾರ ವಿನಿಮಯ ಮಾಡಿಕೊಂಡರು. ಉದಾ: ನಿಕೋಲಾ ಟೆಸ್ಲಾ (Nichola Tesla) ಎಂಬ ಜಗತ್ಪ್ರಸಿದ್ಧ ವಿದ್ಯುತ್ ತಂತ್ರಜ್ಞ ಹಾಗೂ ಭೌತವಿಜ್ಞಾನಿ. ಈಗಲೂ ಸಹ ಇವರ ಸಂಶೋಧನೆಗಳನ್ನು ಕಂಡು ವಿಜ್ಞಾನಿಗಳು ಬೆರಗಾಗುತ್ತಿದ್ದಾರೆ. ಇಂತಹ ವ್ಯಕ್ತಿ ಸ್ವಾಮೀಜಿಗೆ ಪರಿಚಯವಾದ ಕೆಲದಿನಗಳಲ್ಲಿಯೇ ಅವರ ಪ್ರಭಾವಕ್ಕೊಳಗಾಗಿದ್ದರು. ವೇದಾಂತದ ಮೇಲೆ ಸ್ವಾಮೀಜಿಯವರು ನೀಡಿದ ಉಪನ್ಯಾಸವನ್ನು ಕೇಳಿದಮೇಲೆ ಅವರ ಪ್ರತಿಕ್ರಿಯೆ ಹೀಗಿತ್ತು : "ವೇದಾಂತದ ಭಾವನೆಗಳು ತುಂಬಾ ವೈಜ್ಞಾನಿಕ. ಈ ಯುಗದ ಆಶೋತ್ತರಗಳೊಂದಿಗೆ, ಮತ್ತು ಆಧುನಿಕ ವಿಜ್ಞಾನದ ತೀರ್ಮಾನಗಳೊಂದಿಗೆ ಅವು ತುಂಬಾ ಸಾಮರಸ್ಯದಿಂದಿವೆ." ವಿವೇಕಾನಂದರಿಂದ ಪ್ರಭಾವಿತರಾದ ಟೆಸ್ಲಾರು ದ್ರವ್ಯ ಮತ್ತು ಶಕ್ತಿಯ ಕುರಿತು ಮಾತನಾಡುತ್ತಿದ್ದಾಗ ಸಂಸ್ಕೃತದ ಶಬ್ದಗಳಾದ ಆಕಾಶ ಮತ್ತು ಪ್ರಾಣ ಶಬ್ದಗಳನ್ನು ಉಪಯೋಗಿಸತೊಡಗಿದರು. ಟೆಸ್ಲಾರು ವೇದಾಂತದ ಪ್ರಾಣ, ಆಕಾಶ, ಕಲ್ಪ ಮುಂತಾದವುಗಳ ಬಗ್ಗೆ ತಿಳಿದುಕೊಂಡಿದ್ದರು. ಟೆಸ್ಲಾರಿಗನಿಸಿದಂತೆ ಈ ತತ್ತ್ವಗಳನ್ನು ಆಧುನಿಕ ವಿಜ್ಞಾನ ಸ್ವೀಕರಿಸುವುದು. ಆಹ್ವಾನದ ಮೇರೆಗೆ ಟೆಸ್ಲಾರವರ ಪ್ರಯೋಗ ಶಾಲೆಗೆ ಸ್ವಾಮೀಜಿ ಭೇಟಿ ಕೊಟ್ಟಿದ್ದರು. ಲೆಕ್ಕಾಚಾರ ಪೂರ್ವಕವಾಗಿ ಶಕ್ತಿ ಮತ್ತು ದ್ರವ್ಯಗಳು ಹೇಗೆ ರೂಪಾಂತರಗೊಂಡು ಸಂಭವನೀಯ ಚೈತನ್ಯಗಳಾಗಬಲ್ಲವೆಂಬುದನ್ನು ಟೆಸ್ಲಾ ಪ್ರತಿಪಾದಿಸಲು ಸಾಧ್ಯವೆಂದು ಸ್ವಾಮೀಜಿ ಹೇಳುತ್ತಿದ್ದರು. ಸ್ವಾಮೀಜಿಯವರ ಪ್ರಕಾರ ವೇದಾಂತದ ಸೃಷ್ಟಿತತ್ತ್ವ (cosmology) ಮತ್ತು ಅಂತಿಮಗತಿಶಾಸ್ತ್ರ (eschatology)ಗಳು ಆಧುನಿಕ ವಿಜ್ಞಾನದೊಂದಿಗೆ ಸಮರಸಗೊಳ್ಳುವುವು.

ಸ್ವಾಮೀಜಿ ಅಮೆರಿಕಕ್ಕೆ ಬರುವ ೧೫ ವರ್ಷಗಳ ಹಿಂದೆ ಸ್ಥಾಪಿತವಾದ ಬಲೂನ್ ಸೊಸಾಯಿಟಿ(Balloon Society)ಯ ವಿಶೇಷವೇನೆಂದರೆ ಅದು ಆಕಾಶಯಾನ, ರಸಾಯನ ಶಾಸ್ತ್ರ, ಹವಾಮಾನ ಶಾಸ್ತ್ರ ಇತ್ಯಾದಿ ವಿಷಯಗಳಲ್ಲಿ ಪರಿಣತಿಗಳಿಸಿದ ಸದಸ್ಯರಿಂದ ಕೂಡಿದ ಒಂದು ಪ್ರತಿಷ್ಠಿತ ಸಂಸ್ಥೆಯಾಗಿತ್ತು. ಇವರ ಒಂದು ಗುರಿಯೇನೆಂದರೆ ವೈಮಾನಿಕ ಶಾಸ್ತ್ರದ ಅಧ್ಯಯನ ಮತ್ತು ಆಕಾಶಯಾನ ಮಾಡುವಾಗ ದಾಖಲಿಸಿದ ವೈಜ್ಞಾನಿಕ ಅಂಶಗಳನ್ನು ಕುರಿತು ಚಿಂತಿಸುವುದು. ಇಂತಹ ಉನ್ನತ ವಿಜ್ಞಾನಿಗಳ ಸಭೆಯಲ್ಲಿ ಅವರ ಭಾವನೆಗಳಿಗೆ ಸ್ಪಂದಿಸಿ ಸ್ವಾಮೀಜಿ ಹೇಗೆ ಮಾತನಾಡಿದರೆಂಬುದೇ ಆಶ್ಚರ್ಯಕರವಾದದ್ದು ಆಗಿದೆ.

## ಆಕಾಶತತ್ತ್ವವನ್ನು ಕುರಿತು ಸ್ವಾಮೀಜಿ

ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ನ್ಯೂಟನ್ ವಿಜ್ಞಾನಿಯ ಸಿದ್ಧಾಂತಗಳು, ವಿಜ್ಞಾನದ ರಂಗದಲ್ಲಿ ಮಹತ್ವದ ಸ್ಥಾನಮಾನಗಳನ್ನು ಪಡೆದುಕೊಂಡಿದ್ದವು. ನ್ಯೂಟನ್ನನ ಪ್ರಕಾರ "ಜಗತ್ತಿನ ಎಲ್ಲಡೆಯಲ್ಲಿ ಅತಿ ಸೂಕ್ಷ್ಮವಾದ ದ್ರವ್ಯ ಹರಡಿಕೊಂಡಿದೆ. ಅದರಲ್ಲಿ ನಕ್ಷತ್ರ, ಉಲ್ಕೆ, ಗ್ರಹಗಳು ತೇಲಾಡುತ್ತಿರುವುವು. ಈ ದ್ರವ್ಯದ ಹೆಸರ ಈಥರ್ (ether) ಅಥವಾ ಆಕಾಶ. ಎಲ್ಲರ ಅನುಭವವೇನೆಂದರೆ ದೋಣಿ ಒಂದು ನದಿಯಲ್ಲಿ ಪ್ರವಾಹದ ಗುಂಟ ಹೋಗುವಾಗ ಅದರ ವೇಗ ಹೆಚ್ಚುವುದು, ಪ್ರವಾಹದ ವಿರುದ್ಧ ಹೊರಟಾಗ ವೇಗ ಕುಗ್ಗುವುದು. ಇದೇ ರೀತಿ ಬೆಳಕು ಆಕಾಶ ದ್ರವ್ಯದಲ್ಲಿ ಅದು ಚಲಿಸುವ ದಿಕ್ಕಿನಲ್ಲಿ ಹೋಗುವಾಗ ಅದರ ವೇಗ ಹಿಗ್ಗಬೇಕು ಮತ್ತು ವಿರುದ್ಧ ದಿಕ್ಕಿನಲ್ಲಿ ಹೋಗುವಾಗ ಅದರ ವೇಗ ಕುಗ್ಗಬೇಕು. ಆದರೆ ಅದು ಹಾಗಾಗದೆ ಇರುವುದನ್ನು ಮೈಕಲ್ಸನ್ ಮತ್ತು ಮೋರ್ಲೆಯೆಂಬ ವಿಜ್ಞಾನಿಗಳು ಪ್ರಯೋಗಗಳ ಮೂಲಕ ತೋರಿಸಿದರು. ಇದರಿಂದ ಆಕಾಶ ದ್ರವ್ಯದ ಅಸ್ತಿತ್ವದ ಕಲ್ಪನೆಗೆ ಕೊಡಲಿ ಪೆಟ್ಟು ಬಿದ್ದಿತು. ಆದರೆ ಅಷ್ಟು ಸರಳವಾಗಿ ಆಕಾಶದ ಕಲ್ಪನೆಯನ್ನು ಬಿಟ್ಟುಕೊಡುವುದು ದುಸ್ಸಾಧ್ಯ. ಅದರ ಅಸ್ತಿತ್ವದ ಕಲ್ಪನೆಯಿಂದ ಭೌತಶಾಸ್ತ್ರದ ಅನೇಕ ಪ್ರಧಾನ ಅಂಶಗಳನ್ನು ವಿವರಿಸಲು ಸಾಧ್ಯ. ಉದಾ: ತರಂಗ ಸಿದ್ಧಾಂತ, ವಿದ್ಯುತ್ ವಿಜ್ಞಾನ ಇತ್ಯಾದಿ. ಆದರೂ ಸಹ ಐನ್‌ಸ್ಟೈನರು ಆಕಾಶ ಅಸ್ತಿತ್ವದ ಕಲ್ಪನೆಯನ್ನು ಗಣನೆಗೆ ತೆಗೆದುಕೊಳ್ಳದೆ, ನ್ಯೂಟನ್ನನ ಮೂಲಭೂತವಾದಗಳಲ್ಲಿ ಕೆಲವು ಪರಿವರ್ತನೆ ಮಾಡಿ ಪ್ರತಿಪಾದಿಸಿದ ಸಿದ್ಧಾಂತವೇ ಸಾಪೇಕ್ಷತಾವಾದ. ಇದು ನಡೆದದ್ದು ೧೯೦೫ರಲ್ಲಿ. ಆದರೆ ೧೮೯೫ರಲ್ಲಿ *The New York Medical Times* ಎಂಬ ಆಗಿನ ಸುಪ್ರಸಿದ್ಧ ವೈಜ್ಞಾನಿಕ ಪತ್ರಿಕೆಯಲ್ಲಿ ಸ್ವಾಮೀಜಿ ಆಕಾಶದ ಬಗ್ಗೆ ಒಂದು ಸುಂದರವಾದ ವಿದ್ವತ್‌ಪೂರ್ಣ ಲೇಖನವನ್ನು ಪ್ರಕಟಿಸಿದರು. (*Complete Works of Swami Vivekananda*, vol. 9 p. 287-289). ಪ್ರತಿಯೊಬ್ಬ ಭೌತಶಾಸ್ತ್ರದ ಅಧ್ಯಾಪಕರೂ ಪರಿಣಿತರೂ ಈ ಲೇಖನವನ್ನು ಓದಿ ಮೆಚ್ಚಲೇಬೇಕು.

ಅದರಲ್ಲಿ ಸ್ವಾಮೀಜಿ ಆಕಾಶ ಸಿದ್ಧಾಂತದ ಬಗ್ಗೆ ಬೇರೆ ಬೇರೆ ವಿಜ್ಞಾನಿಗಳ ಅಭಿಪ್ರಾಯಗಳನ್ನು ವಿವರಿಸಿ ಕೊನೆಯಲ್ಲಿ ಈ ತೀರ್ಮಾನಕ್ಕೆ ಬರುತ್ತಾರೆ : "ನಾವೀಗ ತಿಳಿದಿರುವಂತೆ ಪ್ರಕೃತಿಯ ಬೇರೆ ಬೇರೆ ಘಟನೆಗಳನ್ನು ವಿವರಿಸಲು ಆಕಾಶ ಸಿದ್ಧಾಂತವು ಅತ್ಯುತ್ತಮವಾದುದು. ಈ ಆಕಾಶವು ವಿದ್ಯುತ್ ಅಥವಾ ಬೇರೆ ಯಾವುದಾದರೂ ಕಣಗಳಿಂದ ಕೂಡಿದೆ ಎಂಬ ವಿಷಯವೂ ಅತ್ಯಂತ ಮೌಲ್ಯವುಳ್ಳದ್ದು. ಆದರೆ ಈ ಕಣಗಳು ಎಷ್ಟೇ ಚಿಕ್ಕವಾಗಿದ್ದರೂ ಅವುಗಳ ನಡುವೆ ಅಂತರವಿರಲೇಬೇಕು, ಮತ್ತು ಈ ಅಂತರವನ್ನು ಯಾವುದು ತುಂಬುತ್ತದೆ ಎಂಬುದು ಪ್ರಶ್ನೆ. ಇನ್ನೂ ಸೂಕ್ಷ್ಮ ಕಣಗಳಿಂದ ತುಂಬಿದೆ ಎಂದರೆ ಅವುಗಳ ಅಂತರವನ್ನು ತುಂಬುವ ಅವಕ್ಕಿಂತ ಸೂಕ್ಷ್ಮವಾದ ಕಣಗಳನ್ನು ಊಹಿಸಬೇಕಾಗುತ್ತದೆ. ಹೀಗೆಯೇ ಇದು ಮುಂದುವರಿಯುತ್ತದೆ.

"ದೇಶ(space)ದಲ್ಲಾಗುವ ಘಟನೆಗಳನ್ನು ವಿವರಿಸುವುದಾದರೂ ಈ ಆಕಾಶ ಸಿದ್ಧಾಂತವು ಅಥವಾ ಆಕಾಶವು ಕಣಗಳಿಂದ ಕೂಡಿದೆ ಎಂಬ ಸಿದ್ಧಾಂತವು ದೇಶದ ಸ್ವರೂಪವನ್ನೇ ವಿವರಿಸುವುದಿಲ್ಲ. ಏಕೆಂದರೆ ಆಕಾಶವು ದೇಶದಲ್ಲಿದೆ ಎಂದು ಮಾತ್ರ ನಾವು ಭಾವಿಸಲು ಸಾಧ್ಯ. ಆದ್ದರಿಂದ ಈ ದೇಶವನ್ನು ವಿವರಿಸುವುದು ಯಾವುದಾದರೂ ಇದ್ದರೆ ಅದು ಈ ಅನಂತ ದೇಶವನ್ನೂ ತನ್ನ ಪರಿಧಿಯೊಳಗೆ ಸೇರಿಸಿಕೊಳ್ಳುವಂತಿರಬೇಕು. ಅನಂತ ಮನಸ್ಸಲ್ಲದೆ ಇನ್ನಾವುದು ತಾನೆ ಈ ಅನಂತ ದೇಶವನ್ನು ಒಳಗೊಳ್ಳಬಲ್ಲದು?"

## ಕಾಲ ದೇಶ ಮತ್ತು ಕಾರ್ಯ-ಕಾರಣ ನಿಯಮ

ಸಾಪೇಕ್ಷ ಸಿದ್ಧಾಂತದ ಹಲವು ಅಂಶಗಳನ್ನು ನಾವು ವಿವೇಕಾನಂದರ ಕೃತಿಗಳಲ್ಲಿ ಕಾಣಬಹುದು. ಉದಾಹರಣೆಗೆ, ದೇಶ-ಕಾಲಗಳ ಸಾಪೇಕ್ಷತೆಯನ್ನು ವಿವೇಕಾನಂದರು ಮೊದಲೇ ಪ್ರತಿಪಾದಿಸಿದ್ದರು. ಅವರು ಹೇಳುತ್ತಾರೆ: "ವಿಶ್ವ ಯಾವಾಗಲೂ ಹಾಗೆಯೇ ಇರುತ್ತದೆ. ಕೋಟ್ಯಂತರ ಬ್ರಹ್ಮಾಂಡಗಳು ಸೃಷ್ಟಿಯಾಗುತ್ತಿವೆ. ಕೋಟ್ಯಂತರ ಬ್ರಹ್ಮಾಂಡಗಳು ನಾಶವಾಗುತ್ತಿವೆ. ಆದರೂ ವಿಶ್ವ ಹಾಗೆಯೇ ಇರುವುದು. ಯಾವುದೊ ಒಂದು ಗ್ರಹಕ್ಕೆ ಸಂಬಂಧಿಸಿದಂತೆ ಅದರ ಆದಿ ಅಂತ್ಯಗಳನ್ನು ಹೇಳಬಹುದು. ಆದರೆ ಇಡೀ ವಿಶ್ವದ ದೃಷ್ಟಿಯಿಂದ ಕಾಲವೆಂಬುದಕ್ಕೆ ಅರ್ಥವಿಲ್ಲ," (ಕೃತಿಶ್ರೇಣಿ, ೬.೩೬೬). ದೇಶ, ಕಾಲ ಮತ್ತು ಕಾರ್ಯ-ಕಾರಣಗಳ ಸಾಪೇಕ್ಷತೆಯನ್ನು ಕುರಿತು ಅವರು ಹೇಳುತ್ತಾರೆ: "ಕಾಲ, ದೇಶ, ಕಾರ್ಯ-ಕಾರಣ ನಿಯಮ—ಇವನ್ನು ಬಗೆಹರಿಸುವ ಪ್ರತಿಯೊಂದು ಪ್ರಯತ್ನವೂ ನಿಷ್ಫಲವಾಗುವುದು. ಏಕೆಂದರೆ ಈ ಪ್ರಯತ್ನ ಮಾಡಬೇಕಾದರೆ ಈ ಮೂರರ ಅಸ್ತಿತ್ವವನ್ನು ನಾವು ಒಪ್ಪಿಕೊಳ್ಳಬೇಕಾಗುವುದು," (ಕೃತಿಶ್ರೇಣಿ, ೨.೩೨). ಅವರು ಮುಂದುವರಿದು ಹೇಳುತ್ತಾರೆ: "ದೇಶ, ಕಾಲ ಮತ್ತು ಕಾರ್ಯ-ಕಾರಣ ನಿಯಮಗಳೆಂಬ ಗಾಜಿನ ಮೂಲಕ ನಾವು ಕೇವಲ ಸತ್ಯವನ್ನು ನೋಡಿದಾಗ ಅದು ವಿಶ್ವವಾಗಿ ನಮಗೆ ಕಾಣಿಸುತ್ತದೆ. ಇದರಿಂದ ನಮಗೆ ತಿಳಿಯುವುದೇನೆಂದರೆ ವಿಶ್ವದಲ್ಲಿ ಕಾಲವಾಗಲಿ, ದೇಶವಾಗಲಿ, ಕಾರ್ಯ-ಕಾರಣ ನಿಯಮವಾಗಲಿ ಇಲ್ಲ."

> ಕಾರ್ಯಕಾರಣವೆಂಬ ನಿರ್ದಿಷ್ಟ ನಿಯಮವೇನೂ ಇಲ್ಲ ಎಂಬ ವಿವೇಕಾನಂದರ ಅಭಿಪ್ರಾಯವು ಕ್ವಾಂಟಮ್ ಸಿದ್ಧಾಂತದ ಬೆನ್ನೆಲುಬಾಯಿತು.
>
> —*ಮೈಕೇಲ್ ಟಾಲ್‌ಬಟ್* (Michael Talbot)

ಮೂರು ಆಯಾಮದ (three dimensional) ದೇಶದ ಸಾಪೇಕ್ಷತೆಯನ್ನು ಚಿತ್ರಿಸಲು ಸ್ವಾಮೀಜಿ ಒಂದು ಕಥೆಯನ್ನು ಹೇಳುತ್ತಾರೆ : ಕೆಲವು ಮಕ್ಕಳನ್ನು ಪರೀಕ್ಷೆ ಮಾಡಲಾಯಿತು. ಪರೀಕ್ಷಕರು ಕಠಿಣ ಪ್ರಶ್ನೆಗಳನ್ನು ಕೇಳಿದರು. ಅವುಗಳಲ್ಲಿ ಒಂದು ಪ್ರಶ್ನೆ ಏನೆಂದರೆ "ಯಾಕೆ ಪೃಥ್ವಿಯು ಬೀಳುವುದಿಲ್ಲ?" ಎಂದು. ಮಕ್ಕಳಲ್ಲಿ ಗುರುತ್ವಾಕರ್ಷದ ಬಗ್ಗೆ ಉತ್ತರಗಳನ್ನು ನಿರೀಕ್ಷಿಸಿ ಪ್ರಶ್ನಿಸಿದ್ದರು. ಇದು ಕಷ್ಟದಾಯಕವಾಯಿತು. ಆದರೆ ಒಬ್ಬ ಚಿಕ್ಕ ಹುಡುಗಿ ಮರುಪ್ರಶ್ನಿಸಿದಳು, "ಅದು ಎಲ್ಲಿ ಬೀಳಬೇಕು?" ಎಂದು. ಇದರ ಅರ್ಥ ಅವರು ಹಾಕಿದ ಪ್ರಶ್ನೆ ತೀರ ಅಸಂಬದ್ಧವಾದುದು ಎಂದು. ಪೃಥ್ವಿಗೆ ಸಂಬಂಧಪಟ್ಟಂತೆ ಅದು ಏರುವುದೂ ಇಲ್ಲ ಬೀಳುವುದೂ ಇಲ್ಲ. ಆಗಸದಲ್ಲಿ ಯಾವುದು ಮೇಲೆ, ಯಾವುದು ಕೆಳಗೆ?

ಮೈಕೇಲ್ ಟಾಲ್‌ಬಟ್ ಹೇಳುತ್ತಾರೆ: "ಕಾರ್ಯ-ಕಾರಣವೆಂಬ ನಿರ್ದಿಷ್ಟ ನಿಯಮವೇನೂ ಇಲ್ಲ ಎಂಬ ವಿವೇಕಾನಂದರ ಅಭಿಪ್ರಾಯವು ಕ್ವಾಂಟಮ್ ಸಿದ್ಧಾಂತದ ಬೆನ್ನೆಲುಬಾಯಿತು." ಅವರು ಮತ್ತೂ ಹೇಳುತ್ತಾರೆ : "ಒಂದು ಕಲ್ಲು ಬೀಳುತ್ತದೆ, ನಾವು ಏಕೆ ಎಂದು ಕೇಳುತ್ತೇವೆ. ಕಾರಣವಿಲ್ಲದೆ ಏನೂ ಆಗುವುದಿಲ್ಲ ಎಂಬ ಊಹೆಯನ್ನು ಈ ಪ್ರಶ್ನೆ ಅವಲಂಬಿಸಿದೆ... ಯಾವುದಾದರೂ ವಿಷಯವಾಗಿ ಏಕೆ ಹೀಗಾಗುತ್ತದೆ ಎಂದು ನಾವು ಕೇಳಿದಾಗ, ಏನೇನಾಗುತ್ತದೊ ಅದಕ್ಕೆಲ್ಲ ಒಂದು ಕಾರಣವಿರಬೇಕೆಂದು ನಾವು ಭಾವಿಸುತ್ತೇವೆ. ಅಂದರೆ ಅದರ ಹಿಂದೆ ಕಾರಣವಾಗಿ ಏನೋ ಇರಬೇಕು ಎಂಬುದು ನಮ್ಮ ಊಹೆ. ಹೀಗೆ ಪೂರ್ವೋತ್ತರ ಶ್ರೇಣಿಯನ್ನೇ ನಾವು ಕಾರ್ಯ-ಕಾರಣ ನಿಯಮ ಎನ್ನುವುದು," (Michael Talbot, *Mysticism and the New Physics*, p.115)

## ಶಕ್ತಿ ಮತ್ತು ದ್ರವ್ಯಗಳು ಬೇರೆಯಲ್ಲ

ವಿವೇಕಾನಂದರು ಶಕ್ತಿಯನ್ನು ಪ್ರಾಣ ಎಂದು ಕರೆಯುತ್ತಾರೆ. ಅವರ ದೃಷ್ಟಿಯಲ್ಲಿ, "ಪ್ರಾಣವೇ ಚಲನೆಯಾಗಿ ಅಭಿವ್ಯಕ್ತವಾಗುತ್ತಿದೆ. ಪ್ರಾಣವೇ ಗುರುತ್ವಾಕರ್ಷಣ ಶಕ್ತಿಯಾಗಿ, ಅಯಸ್ಕಾಂತ ಶಕ್ತಿಯಾಗಿ ಅಭಿವ್ಯಕ್ತವಾಗುತ್ತಿದೆ. ಶಾರೀರಿಕ ಕ್ರಿಯೆಯಂತೆ ಅಭಿವ್ಯಕ್ತಗೊಳ್ಳುತ್ತಿರುವುದೂ ಅದೇ. ನರಗಳ ಶಕ್ತಿ ತರಂಗದಂತೆ ತೋರುವುದೂ ಅದೇ. ಆಲೋಚನಾಶಕ್ತಿಯಂತೆ ವ್ಯಕ್ತವಾಗುತ್ತಿರುವುದೂ ಅದೇ. ಆಲೋಚನೆಯ ಮಟ್ಟದಿಂದ ಹಿಡಿದು, ಕೆಳಗಿರುವ ಸ್ಥೂಲ ಜಡಶಕ್ತಿಯವರೆಗೆ ಇರುವ ಎಲ್ಲವೂ ಪ್ರಾಣದ ಅಭಿವ್ಯಕ್ತಿ," **(ಕೃತಿಶ್ರೇಣಿ, ೨.೩೩೩-೩೪)**. ಎಲ್ಲ ಶಕ್ತಿಗಳೂ ಒಂದೇ, ಕಂಪನ

ವೈವಿಧ್ಯದಿಂದ ಅವು ಬೇರೆ ಬೇರೆಯಾಗಿ ಕಾಣುತ್ತವೆ ಎಂಬ ಆಧುನಿಕ ವೈಜ್ಞಾನಿಕ ಭಾವನೆಯನ್ನೇ ಇಲ್ಲಿ ವಿವೇಕಾನಂದರು ವ್ಯಕ್ತಪಡಿಸುತ್ತಿರುವರು.

ಇಷ್ಟೇ ಅಲ್ಲದೆ, ಶಕ್ತಿ ಮತ್ತು ದ್ರವ್ಯಗಳೂ ಕೂಡ ಸಂಪೂರ್ಣ ಬೇರೆಯಲ್ಲ, ಅವು ಪರಸ್ಪರ ಒಂದಕ್ಕೊಂದು ಬದಲಾಗುತ್ತವೆ ಎಂಬ ಸಾಪೇಕ್ಷ ಸಿದ್ಧಾಂತದ ಅಭಿಪ್ರಾಯವನ್ನು ವಿವೇಕಾನಂದರು ವ್ಯಕ್ತಪಡಿಸುತ್ತಾರೆ. ಅವರು ಹೇಳುತ್ತಾರೆ : "ಮನಸ್ಸು ದ್ರವ್ಯವಾಗುವುದು, ದ್ರವ್ಯ ಮನಸ್ಸಾಗುವುದು. ಇದು ಕೇವಲ ಸ್ಪಂದನದ ತಾರತಮ್ಯವಷ್ಟೇ. ಒಂದು ಉಕ್ಕಿನ ಸಲಾಕಿಯನ್ನು ತೆಗೆದುಕೊಂಡು ಶಕ್ತಿಯನ್ನು ಅದರ ಮೂಲಕ ಹರಿಸಿ ಅದು ಸ್ಪಂದಿಸುವಂತೆ ಮಾಡಿ. ಆಗ ಏನಾಗುವುದು ಎಂಬುದನ್ನು ನೋಡಿ. ಇದನ್ನು ಒಂದು ಕತ್ತಲೆ ಕೋಣೆಯಲ್ಲಿ ಮಾಡಿದರೆ ಮೊದಲು ನಿಮ್ಮ ಅರಿವಿಗೆ ಬರುವುದೇ ಗುಂಯ್‌ಗುಟ್ಟುವ ಶಬ್ದ. ನೀವು ಸ್ಪಂದನವನ್ನು ಹೆಚ್ಚಿಸಿದರೆ ಆ ಉಕ್ಕಿನ ಸಲಾಕಿ ಕಾಂತಿಯಿಂದ ಕೋರೈಸುವುದು. ಸ್ಪಂದನವನ್ನು ಇನ್ನೂ ಹೆಚ್ಚು ಮಾಡಿದರೆ ಉಕ್ಕಿನ ಸಲಾಕಿ ಮಾಯವಾಗಿ ಹೋಗುವುದು, ಅದು ಮನಸ್ಸಾಗುವುದು," (ಕೃತಿಶ್ರೇಣಿ, ೬.೧೭೦).

ಸಾಪೇಕ್ಷ ಸಿದ್ಧಾಂತದ ಇನ್ನೊಂದು ಅಂಶವನ್ನು ಸ್ವಾಮೀಜಿ ಹೇಳುತ್ತಾರೆ: "ಚಲನೆ ಎಂಬುದು ಸಾಪೇಕ್ಷವಾದುದು. ನಾನು ಚಲಿಸುತ್ತೇನೆ ಎಂದು ಇನ್ನೊಂದರ ಸಂಬಂಧದಿಂದ ಮಾತ್ರ ಹೇಳ ಬಹುದು. ಈ ಪ್ರಪಂಚದಲ್ಲಿರುವ ಪ್ರತಿಯೊಂದು ಕಣವೂ ಮತ್ತೊಂದು ಕಣದ ದೃಷ್ಟಿಯಿಂದ ಚಲಿಸುವುದು," (ಕೃತಿಶ್ರೇಣಿ, ೨. ೨೨). ಇನ್ನೊಂದು ಕಡೆ ಹೇಳುತ್ತಾರೆ: "ಮತ್ತೊಂದು ಚಲಿಸದೆ ಇರುವ ವಸ್ತುವಿದ್ದರೆ ಮಾತ್ರ ನಾವು ಚಲನೆಯನ್ನು ಗ್ರಹಿಸಬಹುದು. ಎರಡು ಮೂರು ವಸ್ತುಗಳು ಸಾಪೇಕ್ಷವಾಗಿ ಚಲಿಸುತ್ತಿದ್ದರೆ, ಮೊದಲು ಅತಿವೇಗವಾಗಿ ಹೋಗುವುದನ್ನು, ಅನಂತರ ಅದಕ್ಕಿಂತ ನಿಧಾನವಾಗಿ ಹೋಗುವುದನ್ನು ಕಂಡುಹಿಡಿಯುತ್ತೇವೆ," (ಕೃತಿಶ್ರೇಣಿ, ೨.೪೬೩)

ಆಧುನಿಕ ವಿಜ್ಞಾನವು ಪ್ರತ್ಯೇಕತೆಯನ್ನು ಗುರುತಿಸುವುದಿಲ್ಲ. ಈ ವಿಶ್ವದಲ್ಲಿ ಸಂಪೂರ್ಣ ಪ್ರತ್ಯೇಕ ವಸ್ತುವೆಂಬುದು ಇಲ್ಲವೇ ಇಲ್ಲ. ಎಲ್ಲವೂ ಪರಸ್ಪರ ಸಂಬಂಧವುಳ್ಳವು ಮಾತ್ರವಲ್ಲ, ಎಲ್ಲವೂ ಒಂದರೊಳಗೊಂದು ಸೇರಿಕೊಂಡಿದೆ. ಫ್ರಿಟ್ಜಾಫ್ ಕಾಪ್ರಾ ಹೇಳುತ್ತಾರೆ: "ಆಳ ಪರಿಸರ ವಿಜ್ಞಾನವು ಮಾನವರನ್ನೇ ಆಗಲಿ, ಅಥವಾ ಯಾವುದನ್ನೇ ಆಗಲಿ, ಪ್ರಾಕೃತಿಕ ವಾತಾವರಣದಿಂದ ಪ್ರತ್ಯೇಕಿಸುವುದಿಲ್ಲ. ಅದು ಜಗತ್ತನ್ನು ಪ್ರತ್ಯೇಕ ವಸ್ತುಗಳ ಒಂದು ಸಂಕಲನವೆಂಬಂತೆ ನೋಡುವುದಿಲ್ಲ, ಬದಲು ಪರಸ್ಪರ ಸಂಬಂಧವುಳ್ಳ ಮತ್ತು ಅವಲಂಬನೆಯುಳ್ಳ ಘಟನೆಗಳ ಜಾಲದಂತೆ ನೋಡುತ್ತದೆ," (Fritjof Capra, *Web of Life*, p.7) ವಿವೇಕಾನಂದರು ಬಹಳ ಹಿಂದೆಯೇ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರು ಹೇಳುತ್ತಾರೆ: "ನಮ್ಮ ದೇಹಗಳು ದ್ರವ್ಯಸಾಗರದ ಸಣ್ಣ ಸುಳಿಗಳು. ಸೂರ್ಯ ಚಂದ್ರ ತಾರೆಗಳು ನೀವು ಮತ್ತು ನಾನು ಎಲ್ಲರೂ ವಿವಿಧ ಸುಳಿಗಳು. ನನ್ನ ಮನಸ್ಸೂ ಕೂಡ ಚಿತ್ತಸಾಗರದ ಒಂದು ಸುಳಿ ಅಷ್ಟೆ," (ಕೃತಿಶ್ರೇಣಿ, ೬.೪೨೧-೨೨).

ಹೀಗೆ ಸ್ವಾಮಿ ವಿವೇಕಾನಂದರ ಕೃತಿಗಳಲ್ಲಿ ಅನೇಕ ವೈಜ್ಞಾನಿಕ ಚಿಂತನೆಗಳನ್ನು ಕಾಣುತ್ತೇವೆ. ಆಗಿನ ಕಾಲದಲ್ಲಿ ಪ್ರಚಲಿತವಿದ್ದ ಎಲ್ಲ ವೈಜ್ಞಾನಿಕ ಸಿದ್ಧಾಂತಗಳ ಪರಿಚಯ ಅವರಿಗೆ ಇತ್ತು ಎಂಬುದು ಇದರಿಂದ ತಿಳಿದು ಬರುವುದು ಮಾತ್ರವಲ್ಲದೆ, ಅವುಗಳ ಮೇಲೆ ತಮ್ಮದೇ ವಿಚಾರದ ಬೆಳಕನ್ನು ಚೆಲ್ಲಿರುವರು ಎಂಬುದೂ ನಮ್ಮ ಗಮನಕ್ಕೆ ಬರುತ್ತದೆ. ಅವರ ವೈಜ್ಞಾನಿಕ ಅಂತರ್ದೃಷ್ಟಿ ಇನ್ನೂ ಮುಂದೆ ಹೋಗಿ ಮುಂದಾಗಬಹುದಾದ ಅನೇಕ ವೈಜ್ಞಾನಿಕ ಆವಿಷ್ಕಾರಗಳ ಕಿರುಪರಿಚಯವನ್ನೂ ನಮಗೆ ಮಾಡಿಸಿಕೊಡುತ್ತದೆ. ಈ ವಿಷಯವನ್ನು ಪರಿಗಣಿಸಿದಾಗ ಈ ಅಸಾಧ್ಯ ವ್ಯಕ್ತಿಯ ಮಾನಸಿಕ ಜಗತ್ತಿನ ಅನನ್ಯತೆಗೆ ಅಚ್ಚರಿ ಪಡದಿರಲು ಸಾಧ್ಯವೇ ಇಲ್ಲ.

❖

## ನದಿ-ಕೊಳ ಸಂವಾದ

ಒಂದು ಕೊಳ ನದಿಯನ್ನು ಉದ್ದೇಶಿಸಿ ಹೇಳಿತು: "ನೀನು ಎಂಥ ಮೂರ್ಖ! ನಿರಂತರವಾಗಿ ನಿನ್ನ ನೀರನ್ನು ತೆಗೆದುಕೊಂಡುಹೋಗಿ ಸಮುದ್ರಕ್ಕೆ ತುಂಬಿಸುತ್ತಿದ್ದೀಯೆ. ಅದು ಎಲ್ಲ ನೀರನ್ನು ತಾನೇ ಕಬಳಿಸುತ್ತದೆ. ನೀನು ಹೀಗೆಯೇ ಮಾಡುತ್ತಿದ್ದರೆ ನೀನು ಮುಂದೊಂದು ಕಾಲದಲ್ಲಿ ಸಂಪೂರ್ಣ ಇಲ್ಲವಾಗಿಬಿಡುತ್ತೀಯೆ." ನದಿ ಹೇಳಿತು: "ನಾನೇನು ಮಾಡಲಿ, ಹರಿಯುತ್ತಿರುವುದೇ ನನ್ನ ಸ್ವಭಾವ ಮತ್ತು ಸಮುದ್ರವನ್ನು ಸೇರುವುದೇ ನನ್ನ ಗುರಿ. ಹೀಗೆ ನನ್ನನ್ನು ನಾನು ಸಮರ್ಪಿಸಿಕೊಳ್ಳುವುದರಲ್ಲೇ ನನಗೆ ಆನಂದ. ಅದರಿಂದಾಗಿಯೇ ನಾನು ಬದುಕಿದ್ದೇನೆ." ಕೊಳ ಹೇಳಿತು: "ಇಲ್ಲ, ಅದರಿಂದಾಗಿಯೇ ನೀನು ನಿರಂತರವಾಗಿ ನಶಿಸುತ್ತಿದ್ದೀಯೆ. ನನ್ನನ್ನು ನೋಡು! ಎಲ್ಲ ನೀರನ್ನು ನಾನೇ ಇಟ್ಟಕೊಳ್ಳುತ್ತೇನೆ. ಆದ್ದರಿಂದ ನಾನು ಯಾವಾಗಲೂ ಹೀಗೇ ಇರುತ್ತೇನೆ."

ಆದರೆ ಕೊಳದ ನೀರು ಕ್ರಮೇಣ ಕಲುಷಿತವಾಯಿತು, ಮುಂದೆ ಬತ್ತಿಹೋಗಿ ಅದರ ಅಸ್ತಿತ್ವವೇ ಇಲ್ಲವಾಯಿತು. ಸಮುದ್ರಕ್ಕೆ ಸೇರಿದ ನದಿಯ ನೀರಾದರೋ ಆವಿಯಾಗಿ ಮೇಲೆ ಹೋಗಿ, ಮೋಡದ ರೂಪದಲ್ಲಿ ಮಳೆಗರೆದು ಪುನಃ ನದಿಯನ್ನು ಸೇರಿತು. ಹೀಗೆ ನದಿ ನಿರಂತರವಾಗಿ ನಿರ್ಮಲವಾಗಿ ಹರಿಯುತ್ತಲೇ ಉಳಿಯಿತು.

ಇದೇ ಜೀವನದ ನಿಯಮ. ನೀಡುವುದರ ಮೂಲಕ ನಾವು ಪಡೆಯುತ್ತೇವೆ. ಆಗ ಬದುಕು ಹೊಸತನದಿಂದ ಕೂಡಿರುತ್ತದೆ. ಇಲ್ಲದಿದ್ದರೆ ನಾವು ನಿಂತನೀರಾಗಿ ನಾವೂ ದುಃಖಕ್ಕೀಡಾಗಿ ಇತರರಿಗೂ ದುಃಖವನ್ನು ನೀಡುತ್ತೇವೆ. (ಸಾಧಾರ: ಇಂಟರ್‌ನೆಟ್)

ಸ್ಥಳದಾನ: ಕಲ್ಪಕ ಟ್ರಾವೆಲ್ಸ್, ಬೆಂಗಳೂರು